

# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಕನ್ನಡ ದಿನ ಪತ್ರಿಕೆ   Kannada Daily

ಸಂಪಾದಕ : ಮಂಜು ಬನವಾಸೆ

ಹಾಸನ   E-mail : kannadapostnews@gmail.com   / ಕನ್ನಡ post   Price: ₹1

Vol.No.01 | Issue. 216 | Pages. 2 | Date: 06-07-2025, SUNDAY   RNI NO: KARKAN/2024/89601

ಸಂಪುಟ : 01 - ಸಂಚಿಕೆ : 216 - ಪುಟಗಳು : 2 - 06 ಜುಲೈ 2025 ಭಾನುವಾರ   Ph: 8762954248   ದರ : ₹1


# ಚನ್ನಕೇಶವ ದೇಗುಲಕ್ಕೆ ಸೌಕರ್ಯ ಕಲ್ಪಿಸಲು ಕ್ರಮ

## ದೇವಸ್ಥಾನಕ್ಕೆ ಜಿಲ್ಲಾಧಿಕಾರಿ ಭೇಟಿ | ಪೂರ್ಣಕುಂಭ ಸ್ವಾಗತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಹೊಯ್ಸಳರ ಶಿಲ್ಪಕಲಾ ಕೇಂದ್ರವಾಗಿರುವ ಬೇಲೂರಿನ ಚನ್ನಕೇಶವ ದೇಗುಲ ವಿಶ್ವ ಪಾರಂಪರಿಕ ತಾಣವಾಗಿದ್ದು ಇಲ್ಲಿ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ಶನಿವಾರ ಚನ್ನಕೇಶವ ದೇಗುಲ ವೀಕ್ಷಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ದೇವಸ್ಥಾನಕ್ಕೆ ಮೂಲಭೂತ ಸೌಕರ್ಯ ಒದಗಿಸುವುದು ನಮಗೆ ಸವಾಲಾಗಿದೆ. ಇಲ್ಲಿನ ಸಂಪ್ರದಾಯ, ಗೌರವ ಹಿತವಾಗಿ, ಆಧ್ಯಾತ್ಮಿಕವಾಗಿ ಅದರಲ್ಲೂ ಸಂಪ್ರದಾಯಬದ್ಧವಾಗಿ ದೇಗುಲದಿಂದ ನಮ್ಮನ್ನು ಸ್ವಾಗತಿಸಿದ ರೀತಿ ಸಂತೋಷ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಚನ್ನಕೇಶವ ಸ್ವಾಮಿ ದೇಗುಲ ಹಾಗೂ ಹಳೇಬೀಡು ದೇಗುಲ ಕೇವಲ ಒಂದು ಗ್ರಾಮಕ್ಕೆ ತಾಲ್ಲೂಕಿಗೆ, ಜಿಲ್ಲೆಗೆ ಸೀಮಿತವಾದುದಲ್ಲ. ಇಡೀ ಪ್ರಪಂಚಕ್ಕೆ ಹೆಸರುವಾಸಿಯಾಗಿರು ದೇಗುಲಗಳು. ಇಲ್ಲಿನ ವಾಸ್ತು ಶಿಲ್ಪಗಳ ಬಗ್ಗೆ ಇಡೀ ಪ್ರಪಂಚದ ಜನರಿಗೆ ತಿಳಿಸುವಂತಹ ಮತ್ತು ಇಲ್ಲಿನ ಅಭಿವೃದ್ಧಿ ನಮ್ಮ ಮೊದಲ ಆದ್ಯತೆ ಎಂದರು.

ಪ್ರವಾಸಿಗರು ಎದುರಿಸುತ್ತಿರುವ ವಾಹನ ಪಾರ್ಕಿಂಗ್ ಸಮಸ್ಯೆ, ದೇವಸ್ಥಾನದ ಆಸ್ತಿ-ಪಾಸ್ತಿ ರಕ್ಷಣೆ, ಶೌಚಾಲಯ, ಸ್ವಚ್ಛತೆ ಮತ್ತು ದೇಗುಲಕ್ಕೆ ಹೆಚ್ಚಿನ ಪ್ರವಾಸಿಗರು ಆಗಮಿಸಿದಾಗ ಅವರಿಗೆ ಬೇಕಾಗುವ ಮೂಲಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಹೇಳಿದರು.

### ಪೂರ್ಣಕುಂಭ ಸ್ವಾಗತ

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರಿಗೆ ಪೂರ್ಣಕುಂಭ ಸ್ವಾಗತ ಕೋರಲಾಯಿತು. ದೇವಸ್ಥಾನ ಸಂಪ್ರದಾಯದಂತೆ ಅರ್ಚಕರಾದ ಶ್ರೀನಿವಾಸ ಭಟ್ಟ ಮತ್ತು ನರಸಿಂಹಸ್ವಾಮಿ ಪ್ರಿಯ ಭಟ್ಟ ಅವರ ತಂಡ ಪೂರ್ಣಕುಂಭ ಸ್ವಾಗತ ನೀಡಿತು.

ಜಿಲ್ಲೆಯಲ್ಲಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಕಾಡಾನೆಗಳ ಹಾವಳಿ ಸೇರಿ ರೈತರು ಮತ್ತು ಇಲ್ಲಿನ ಬಡ ಜನರ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗುವ ಹಾಗೆ ಜಿಲ್ಲಾಡಳಿತದಿಂದ ಸಹಕಾರ ಮತ್ತು ಕ್ರಮ ಕೈಗೊಳ್ಳಲಾಗುವುದು ಎಂದರು.

ದೇಗುಲದ 100 ಮೀಟರ್ ಸುತ್ತಳತೆಯಲ್ಲಿ ಬಡವ ಶ್ರೀಮಂತ ಯಾರೇ ಆಗಿರಲಿ ಕಾನೂನು ಉಲ್ಲಂಘಿಸಿದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಶೀಘ್ರದಲ್ಲೇ ಬೇಲೂರಿನಲ್ಲೇ ಪುರಾತತ್ವ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಕಂದಾಯ ಇಲಾಖೆ, ಪುರಸಭೆ ಅಧಿಕಾರಿ ಮತ್ತು ಸಿಬ್ಬಂದಿಯೊಂದಿಗೆ ಜಂಟಿ ಸಭೆ ನಡೆಸಲಾಗುವುದು.

ಜೊತೆಗೆ ಇಲ್ಲಿನ ಸಾರ್ವಜನಿಕರು ಮತ್ತು ಪ್ರಬುದ್ಧರೊಂದಿಗೆ ಅವರ ಸಲಹೆ ಸಹಕಾರ ಅಭಿಪ್ರಾಯ ಪಡೆದು ಕ್ರಮ ಜರುಗಿಸಲಾಗುವುದು.

ತಹಶೀಲ್ದಾರ್ ಶ್ರೀಧರ್, ದೇಗುಲದ ಕಾರ್ಯನಿರ್ವಹಣಾಧಿಕಾರಿ ಯೋಗೀಶ್, ಪಿಎಸ್ಐ ಎಸ್.ಜಿ. ಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿ ರಾಜೇಗೌಡ ಹಾಗೂ ಇತರರಿದ್ದರು.

# ಹೆತ್ತೂರು ಭಾಗದಲ್ಲಿ ಧಾರಾಕಾರ ಮಳೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೆತ್ತೂರು: ಮಲೆನಾಡು ಭಾಗವಾದ ಹೆತ್ತೂರು, ಯಸಳೂರು ಭಾಗದಲ್ಲಿ ಶನಿವಾರ ಜೋರು ಮಳೆ ಸುರಿದಿದ್ದು ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ.

ಭಾರೀ ಗಾಳಿಗೆ ಕರ್ಕಿಹಳ್ಳಿ ಗ್ರಾಮದ ಪುಟ್ಟಮ್ಮ ಎಂಬುವರ ಮನೆಗೋಡೆ ಕುಸಿದಿದೆ. ನಸುಕಿನಿಂದಲೂ ಧಾರಾಕಾರವಾಗಿ ಸುರಿದ ಮಳೆ, ಮಧ್ಯಾಹ್ನ ಕೆಲಕಾಲ ಬಿಡುವು ನೀಡಿತ್ತು. ಮತ್ತೆ ಮಧ್ಯಾಹ್ನದ ಬಳಿಕ ಬಿಡುವಿಲ್ಲದೆ ಸುರಿಯಿತು.

ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಹೇಮಾವತಿ ಉಪನದಿಗಳಲ್ಲಿ ನೀರಿನ ಮಟ್ಟ ಹೆಚ್ಚಿದೆ. ಹೇಮಾವತಿ ಉಪ ನದಿಯು ಐಗೂರು ಬಳಿ ಗದ್ದೆ ಬಯಲಿಗೆ ವ್ಯಾಪಿಸಿದ್ದು, ಮಳೆ ಹೆಚ್ಚಾದರೆ ಯಡಕೇರಿ-ಹೆತ್ತೂರು ರಸ್ತೆ ಸಂಪರ್ಕಿಸುವ ಸೇತುವೆ ಮೇಲೆ ನೀರು ವ್ಯಾಪಿಸುವ ಆತಂಕ ನಿರ್ಮಾಣವಾಗಿದೆ. ಮಳೆಯೊಂದಿಗೆ ಮಂಜು ಕವಿದ ವಾತಾವರಣ ನಿರ್ಮಾಣವಾಗಿ ಹೆದ್ದಾರಿಯಲ್ಲಿ ವಾಹನ ಸವಾರರು ಪರದಾಡಿದರು. ಬಾಣಗೇರಿ ಬಳಿ ರಸ್ತೆಗೆ ಮಳೆ ನೀರು ಸಂಗ್ರಹವಾಗಿ ಸಂಚಾರಕ್ಕೆ ಅಡ್ಡಿಯಾಯಿತು.

ಹೋಬಳಿಯ ಹಲವು ಪ್ರದೇಶಗಳಲ್ಲಿ ಸಸಿ ಮಡಿ ನಿರ್ಮಾಣಕ್ಕಾಗಿ ಹಾಕಿದ್ದ ಬೀಜದ ಭತ್ತವು ರಭಸದ ಮಳೆ ನೀರಿಗೆ ಸರಿಯಾಗಿ ಮೊಳಕೆ ಬಾರದೆ ರೈತರಿಗೆ ನಷ್ಟ ಉಂಟಾಗಿದೆ. ಹೋಬಳಿಯ ಚಿನ್ನಹಳ್ಳಿ ಗ್ರಾಮದಲ್ಲಿ ಕಳೆದ 24 ಗಂಟೆಗಳಲ್ಲಿ 8.425 ಸೆಂ.ಮೀ. ಮಳೆಯಾಗಿದೆ.

# ದ್ವಿಭಾಷಾ ನೀತಿ ಜಾರಿಗೆ ಒತ್ತಾಯಿಸಿ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಹಿಂದಿಯನ್ನು ಕಡ್ಡಾಯವಾಗಿಸುವ ತೃತೀಯ ಭಾಷಾ ನೀತಿ ವಿರೋಧಿಸಿ, ದ್ವಿಭಾಷಾ ನೀತಿ ಜಾರಿಗೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ನಾರಾಯಣಗೌಡ ಬಣದ ಕಾರ್ಯಕರ್ತರು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ನಗರದ ಎನ್.ಆರ್. ವೃತ್ತದಿಂದ ಮೆರವಣಿಗೆ ಮೂಲಕ ಬಂದ ಪ್ರತಿಭಟನಾಕಾರರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಹಾಸನ ಜಿಲ್ಲಾಧ್ಯಕ್ಷ ಸಿ.ಡಿ. ಮನುಕುಮಾರ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ, ಶಿಕ್ಷಣದಲ್ಲಿ ಹಿಂದಿಯನ್ನು ತೃತೀಯ ಭಾಷೆಯಾಗಿ ಕಡ್ಡಾಯವಾಗಿರಿಸಿರುವ ರಾಜ್ಯ ಪಠ್ಯಕ್ರಮವನ್ನು ತೀವ್ರವಾಗಿ ವಿರೋಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಪ್ರಮುಖ ಒತ್ತಾಯಗಳು:

ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳನ್ನು ಕಡ್ಡಾಯಗೊಳಿಸಿ ದ್ವಿಭಾಷಾ ನೀತಿ ಜಾರಿಗೆ ತರಬೇಕು. ತೃತೀಯ ಭಾಷೆಯಾಗಿ ಹಿಂದಿಯನ್ನು ಪಠ್ಯಕ್ರಮದಿಂದ ತೆಗೆದು ಹಾಕಬೇಕು. ರಾಜ್ಯ ಹಾಗೂ ಕೇಂದ್ರ ಶಿಕ್ಷಣ ಮಂಡಳಿಗಳಾದ ಸಿಬಿಎಸ್ಇ, ಐಸಿಎಸ್ಇ ಶಾಲೆಗಳಲ್ಲಿ ಏಕರೂಪದ ದ್ವಿಭಾಷಾ ನೀತಿ ಜಾರಿಗೆ ತರಬೇಕು. ಸಿಬಿಎಸ್ಇ ಮತ್ತು ಐಸಿಎಸ್ಇ ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಕಡ್ಡಾಯಗೊಳಿಸಬೇಕು. ಕನ್ನಡ ಮಾಧ್ಯಮ ಶಾಲೆಗಳಿಗೆ ಉತ್ತಮ ಗುಣಮಟ್ಟದ ಇಂಗ್ಲಿಷ್ ಶಿಕ್ಷಣ ಒದಗಿಸಬೇಕು ಎಂದು ಆಗ್ರಹಿಸಿದರು.

2024ರ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ 90,794 ವಿದ್ಯಾರ್ಥಿಗಳು ಹಿಂದಿಯಲ್ಲಿ ಅನುತ್ತೀರ್ಣರಾಗಿದ್ದು, ಈ ಶೈಕ್ಷಣಿಕ ಒತ್ತಡದಿಂದ ಶೆ.21 ರಷ್ಟು ವಿದ್ಯಾರ್ಥಿಗಳ ಭವಿಷ್ಯ ತೊಂದರೆಯಲ್ಲಿ ಸಿಕ್ಕಿಬಿದ್ದಿದೆ. 2025ರ ವೀಕ್ಷಣೆ ಪ್ರಕಾರ ಈ ಸಂಖ್ಯೆ 1.2 ಲಕ್ಷಕ್ಕಿಂತ ಹೆಚ್ಚು ಎಂದು ನಿರೀಕ್ಷಿಸಲಾಗಿದೆ. ರಾಜ್ಯಪಾಲನ ಮಾದರಿಗಳಂತೆ ದ್ವಿಭಾಷಾ ನೀತಿ ಕರ್ನಾಟಕ ರಾಜ್ಯಕ್ಕೆ ಅನಿವಾರ್ಯ. ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ತಮಿಳು-ಇಂಗ್ಲಿಷ್, ಮರಾಠಿ-ಇಂಗ್ಲಿಷ್ ಜೋಡಿಗಳೊಂದಿಗೆ ದ್ವಿಭಾಷಾ ನೀತಿ ಯಶಸ್ವಿಯಾಗಿ ಜಾರಿಗೆ ಬಂದು ಹಲವು ದಶಕ ಕಳೆದಿವೆ.

ಇಂತಹ ನೀತಿಯ ಅನುಸರಣೆ ಕನ್ನಡಿಗರ ಶೈಕ್ಷಣಿಕ ಭವಿಷ್ಯಕ್ಕಾಗಿ ಕರುನಾಡಿನಲ್ಲೂ ಆಗ ಬೇಕಾಗಿದೆ ಎಂದು ಆಗ್ರಹಿಸಿದರು. ನಂತರ ಜಿಲ್ಲಾಡಳಿತದ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ಸೀತಾರಾಂ, ಹೇಮಂತ್ ಕುಮಾರ್, ಪ್ರಧಾನ ಕಾರ್ಯದರ್ಶಿ ತನುಗೌಡ, ಕಾರ್ಯದರ್ಶಿ ರಘುಪಾಳ್ಯ, ಜಿಲ್ಲಾ ವಿದ್ಯಾರ್ಥಿ ಘಟಕದ ಅಧ್ಯಕ್ಷ ಅಭಿಗೌಡ, ಸಕಲೇಶಪುರ ತಾಲ್ಲೂಕು ಅಧ್ಯಕ್ಷ ಗಗನ್‌ಗೌಡ, ಬೇಲೂರು ಅಧ್ಯಕ್ಷ ಬಿ. ಚಂದ್ರಶೇಖರ್, ಚನ್ನರಾಯಪಟ್ಟಣ ಅಧ್ಯಕ್ಷ ಮಧು ಕರಡೇವು, ಅರಸೀಕೆರೆ ಅಧ್ಯಕ್ಷ ಕಿರಣ್ ಕುಮಾರ್, ಹೊಳೆನರಸೀಪುರ ತಾಲ್ಲೂಕು ಅಧ್ಯಕ್ಷ ಓಯಿಲೇಶ್, ಅರಕಲಗೂಡು ಅಧ್ಯಕ್ಷ ಸೋಮಶೇಖರ್, ಆಲೂರು ಅಧ್ಯಕ್ಷ ನಟರಾಜ್, ಸಾಮಾಜಿಕ ಜಾಲತಾಣದ ಸಂಚಾಲಕ ಎಸ್.ಎ. ಅಬ್ದುಲ್ ಖಾದರ್, ಮೋಹನ್‌ಗೌಡ, ಚಂದ್ರೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಬಿ.ಆರ್. ಬೊಮ್ಮೇಗೌಡ, ರಾಜ್ಯ ಪರಿಷತ್ ಸದಸ್ಯ ನಾಗರಾಜ್ ಹೆತ್ತೂರು ಇತರರಿದ್ದರು.

# ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸಮಾಜ ಸುಧಾರಕ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸಾಹಿತಿಯಷ್ಟೇ ಅಲ್ಲ ಅವರೊಬ್ಬ ಸಮಾಜ ಸುಧಾರಕ ಎಂದು ಸಾಹಿತಿ ಗೊರೂರು ಶಿವೇಶ್ ಹೇಳಿದರು.

ನಗರದ ಕಲಾ, ವಾಣಿಜ್ಯ ಹಾಗೂ ಸ್ನಾತಕೋತ್ತರ (ಸ್ವಾಯತ್ತ) ಕಾಲೇಜಿನಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಡೆದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 121ನೇ ಜಯಂತಿಯಲ್ಲಿ ಮಾತನಾಡಿದರು.

ರಾಮಸ್ವಾಮಿ ಅಯ್ಯಂಗಾರ್ ಅವರು ಒಬ್ಬ ಗಾಂಧಿವಾದಿಯಾಗಿದ್ದರು. ಮಹಾತ್ಮ ಗಾಂಧೀಜೀ ಅವರ ಸ್ವರಾಜ್ಯದ ಕನಸು ನನಸು ಮಾಡುವ ನಿಟ್ಟಿನಲ್ಲಿ ಗ್ರಾಮಗಳ ಅಭಿವೃದ್ಧಿಯ ಕನಸು ಹೊತ್ತು ಸ್ವಗ್ರಾಮದಲ್ಲಿ ನೆಲೆಸಿ ಅದಕ್ಕಾಗಿ ಜೀವನ ಮುಡಿಪಾಗಿಟ್ಟರು ಎಂದರು.

ಸಾಹಿತಿಯಾಗಿ, ಸಮಾಜ ಸುಧಾರಕರಾಗಿ, ರಾಜಕಾರಣಿಯಾಗಿ ಅವರದ್ದು ಆದರ್ಶ ಬದುಕು, ಸ್ವಾತಂತ್ರ್ಯ ಹೋರಾಟ, ಮೈಸೂರು ಪ್ರಜಾಸತ್ತಾತ್ಮಕ ಸರ್ಕಾರಕ್ಕಾಗಿ ಹೋರಾಟ, ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಅವರು ಮುಂಚೂಣಿಯ ಹೋರಾಟಗಾರರಾಗಿದ್ದರು ಎಂದರು.

ಪ್ರಾಂಶುಪಾಲ ಡಾ. ಇರ್ಷಾದ್ ಮಾತನಾಡಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಸಾಹಿತ್ಯ ಕೃಷಿಯಲ್ಲಿ ಸಾಮರಸ್ಯಯುತವಾದ ಒಂದು ಸಮಷ್ಟಿಯ ಚಿತ್ರವನ್ನು ಮೂಡಿಸಿದ್ದಾರೆ. ಗ್ರಾಮ ಜೀವನದಲ್ಲಿ ಮಹತ್ವದ ಪಾತ್ರವಹಿಸುವ ಉತ್ಸವಗಳು, ಹಬ್ಬ ಹರಿದಿನಗಳು, ಜನಪದ ಕಲೆಗಳು, ಜನತೆಯಲ್ಲಿ ರೂಢವಾಗಿರುವ ಆಚಾರ ವಿಚಾರ, ನಂಬಿಕೆ ನಡಾವಳಿಗಳು ಎಲ್ಲವನ್ನೂ ಯಥಾವತ್ತಾಗಿ, ಸಜೀವವಾಗಿ ಸೆರೆ ಹಿಡಿದಿವೆ ಎಂದರು.

ಗೊರೂರರ ಕೃತಿಗಳಲ್ಲಿ ಗ್ರಾಮೀಣ ಸಂಸ್ಕೃತಿಯ ವಿಶ್ವರೂಪವನ್ನೇ ಕಾಣಬಹುದು. ಹಾಸ್ಯ ಮನೋಧರ್ಮದ ವ್ಯಕ್ತಿತ್ವದ ಅವರು ಅದನ್ನು ಸಾಹಿತ್ಯದೊಳಗೆ ಬೆರೆಸಿದ ರೀತಿ ಓದುಗರನ್ನು ಪ್ರೇರಿಪಿಸುತ್ತದೆ. ಅವರ ಸಾಹಿತ್ಯ ಹಳ್ಳಿಗಳ ಬದುಕಿನ ಕಡೆಗೆ ಹೆಚ್ಚೆಚ್ಚು ಚಿತ್ರಿತ ಆಗುವುದರೊಂದಿಗೆ ಅಸಮಾನತೆ ತೊಡೆಯಬೇಕೆಂಬ ಮೂಲ ಮಂತ್ರವನ್ನು ಸಾರುತ್ತಿತ್ತು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ.ಆರ್. ಬೊಮ್ಮೇಗೌಡ ಮಾತನಾಡಿ, ಗೊರೂರರು ಜಿಲ್ಲೆಗೊಂದು ದೊಡ್ಡ ಗರಿಮೆ, ಅವರು ಸಾಹಿತಿಯಾಗಿ, ರಾಜಕಾರಣಿಯಾಗಿ, ಸಮಾಜ ಸುಧಾರಕರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಶ್ಲಾಘನೀಯ ಕೆಲಸ ಮಾಡಿದ್ದಾರೆ ಎಂದರು. ಅಂದಿನ ಸಮಾಜದಲ್ಲಿ ಸಾಮರಸ್ಯದ ಬದುಕಿಗೆ ತೊಡಕಾಗಿದ್ದ ಜಾತಿ ವ್ಯವಸ್ಥೆಯ ವಿರುದ್ಧ ತಮ್ಮ ಸಾಹಿತ್ಯದ ಮೂಲಕ ಚಾಟಿ ಏಟು ಕೊಟ್ಟು ಸಮಾಜವನ್ನು ಎಚ್ಚರಿಸುವ ಕೆಲಸ ಮಾಡುವುದರ ಜೊತೆಗೆ, ಸಾಮರಸ್ಯದ ಬದುಕು ಹಳ್ಳಿಗಳ ಉದ್ಧಾರಕ್ಕಿರುವ ಏಕೈಕ ಮಾರ್ಗ ಎಂಬುದನ್ನು ಸಾರಿ ಹೋಗಿದ್ದಾರೆ ಎಂದರು.

ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕ ಸತ್ಯಮೂರ್ತಿ, ಪರಿಷತ್ತಿನ ಮಾರ್ಗದರ್ಶಿ ಸಮಿತಿ ಸದಸ್ಯ ಪ್ರಕಾಶ್ ಮೇಗಲಕೇರಿ, ತಾಲೂಕು ಕಸಾಪ ಅಧ್ಯಕ್ಷ ಮಮತೇಶ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಆರ್.ಬಿ. ಶಂಕರ್, ಸಂಘ ಸಂಸ್ಥೆಗಳ ಪ್ರತಿನಿಧಿ ನಂದನ್, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಕೆ.ವಿ. ಪಾರ್ಥೇಶ್ ಮತ್ತಿತರರಿದ್ದರು.

# ವಿದ್ಯುತ್ ಸ್ಪರ್ಶದಿಂದ ಲೈನ್‌ಮ್ಯಾನ್ ಸಾವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ಮೊಸಳೆಹೊಸಹಳ್ಳಿ ಗ್ರಾಮದಲ್ಲಿ ಶನಿವಾರ ವಿದ್ಯುತ್ ಲೈನ್ ದುರಸ್ತಿ ಮಾಡುತ್ತಿದ್ದ ವೇಳೆ ವಿದ್ಯುತ್ ಸ್ಪರ್ಶದಿಂದ ಲೈನ್‌ಮ್ಯಾನ್ ಮೃತಪಟ್ಟಿದ್ದಾರೆ.

ಅಮ್ಮಗೋಡನಹಳ್ಳಿ ಗ್ರಾಮದ ವರುಣ್ (32) ಮೃತರು. ರೈಲ್ವೆ ನಿಲ್ದಾಣದ ಬಳಿ ವಿದ್ಯುತ್ ಕಂಬವೇರಿ ಲೈನ್ ದುರಸ್ತಿ ಕಾರ್ಯದಲ್ಲಿ ನಿರತರಾಗಿದ್ದಾಗ ದುರ್ಘಟನೆ ಸಂಭವಿಸಿದೆ.

### ಸಂಸದರ ಸಾಂತ್ವನ

ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಮೃತರ ಅಂತಿಮ ದರ್ಶನ ಪಡೆದ ಸಂಸದ ಶ್ರೇಯಸ್ ಪಟೇಲ್, ವರುಣ್ ಅವರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಮೃತರ ಕುಟುಂಬಸ್ಥರ ದುಃಖದಲ್ಲಿ ಪಾಲ್ಗೊಂಡ ಸಂಸದರು, ಧೈರ್ಯ ತುಂಬಿದರು.

ವರುಣ್ ಅವರ ಅಗಲಿಕೆಯಿಂದ ತೀವ್ರ ದುಃಖವಾಗಿದೆ. ಕುಟುಂಬಸ್ಥರಿಗೆ ನೋವು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ವರುಣ್ ಅವರ ಕುಟುಂಬಸ್ಥರ ಜೊತೆಗೆ ನಾವು ಸದಾ ಇರುತ್ತೇವೆ. ಸರ್ಕಾರದಿಂದ ಸೂಕ್ತ ಪರಿಹಾರ ಕಲ್ಪಿಸುವ ಕೆಲಸ ಮಾಡಲಾಗುವುದು. ಈ ಸಂಬಂಧ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಸಂಸದ ಶ್ರೇಯಸ್ ಪಟೇಲ್ ತಿಳಿಸಿದ್ದಾರೆ.

# ಗೊಂದಲದ ಗೂಡಾದ ಬಗರ್ ಹುಕುಂ ಸಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬಗರ್ ಹುಕುಂ ಸಮಿತಿ ಸಭೆ ಗೊಂದಲದ ಗೂಡಾಗಿ ಪರಿಣಮಿಸಿತು.

ಅರ್ನಹರಿಗೆ ಭೂಮಿ ಮಂಜೂರು ಮಾಡಿದ್ದಾರೆಂದು ಹೆತ್ತಗೌಡನಹಳ್ಳಿ ಗ್ರಾಮದ ವಿಜಯಕುಮಾರ್ ಹಾಗೂ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದರಿಂದ ಶಾಸಕ ಎ.ಮಂಜು ಇರುಸುಮುರುಸು ಅನುಭವಿಸಿದರು. ಸಭೆ ಗದ್ದಲ ಗಲಾಟೆಯಲ್ಲೇ ಮುಗಿಯಿತು. ಸಭೆಯಲ್ಲಿ 1991ನೇ ಸಾಲಿನಲ್ಲಿ ಸರ್ಕಾರಿ ಜಮೀನು ಉಳುಮೆ ಮಾಡಿದ್ದ ಅರ್ಜಿಗಳ ವಿಲೇವಾರಿ ಮಾಡಿದ್ದು, 11 ರೈತರಿಗೆ ಸಾಗುವಳಿ ಪತ್ರ ವಿತರಿಸಲಾಯಿತು. ಹೆತ್ತಗೌಡನಹಳ್ಳಿ ಗ್ರಾಮದ ವಿಜಯ್ ಕುಮಾರ್ ಎಂಬಾತ ಗ್ರಾಮದ ಐದು ಜನರ ಜೊತೆ ವಾಗ್ವಾದ ನಡೆಸಿದ. ಶಾಸಕ ಎ. ಮಂಜು ಅವರು ತಮ್ಮ ಬೆಂಬಲಿಗರಿಗೆ, ಪಕ್ಷದ ಕಾರ್ಯಕರ್ತರಿಗೆ ಭೂಮಿ ಮಂಜೂರು ಮಾಡಿಸಿದ್ದಾರೆಂದು ಶಾಸಕರು ಹಾಗೂ ತಹಶೀಲ್ದಾರ್ ಕೆ.ಸಿ. ಸೌಮ್ಯ ಅವರ ವಿರುದ್ಧ ಧಿಕ್ಕಾರ ಕೂಗಿದರು.

ನೀವು ಶಾಸಕರಾಗಿದ್ದು ನಮ್ಮಿಂದ ಎಂಬುದು ನೆನಪಿರಲಿ. ನಾವು ಏನು ಕೇಳಿದರೂ ಉತ್ತರ ನೀಡದೆ ಹೋಗುತ್ತಾರೆ. ಹೀಗಾದರೆ ಯಾರನ್ನು ಪ್ರಶ್ನಿಸುವುದೆಂದು ಧಿಕ್ಕಾರ ಕೂಗಿದರು. ಶಾಸಕರು ಹಣ ಪಡೆದು ಬಗರ್ ಹುಕುಂ ಸಾಗುವಳಿ ಭೂಮಿ ಮಂಜೂರು ಮಾಡುತ್ತಿದ್ದಾರೆ. ಇನ್ನು ಮುಂದೆ ಯಾವ ಕಾರ್ಯಕ್ರಮಕ್ಕೂ ಶಾಸಕರು ನಮ್ಮ ಊರಿಗೆ ಬರುವಂತಿಲ್ಲವೆಂದು ಎಚ್ಚರಿಕೆ ನೀಡಿದರು. ಶಾಸಕ ಎ. ಮಂಜು ಮಾತನಾಡಿ, ನಿಮ್ಮ ತಕಾರರು ಏನೇ ಇದ್ದರೂ ತಹಶೀಲ್ದಾರ್ ಅವರಿಗೆ ಲಿಖಿತವಾಗಿ ಸಲ್ಲಿಸಬೇಕು. ಈ ರೀತಿ ಕೂಗಾಡಿ ಗೊಂದಲ ಸೃಷ್ಟಿಸುವುದರಿಂದ ಯಾವ ಪ್ರಯೋಜನವಿಲ್ಲ. ನಾನು ಹೋರಾಟದಿಂದಲೇ ರಾಜಕೀಯಕ್ಕೆ ಬಂದಿದ್ದೇನೆ. ಈ ರೀತಿಯ ವರ್ತನೆ ಸರಿಯಲ್ಲ. ನಿಮ್ಮ ಊರಿಗೆ ಬಂದೇ ಬರುತ್ತೇನೆ ಎಂದರು.

# ಒಕ್ಕಲಿಗ ಎಂದರೆ ಅಸ್ಮಿತೆ-ಗೌರವ: ಚುಂಚಶ್ರೀ

## ಅಮೆರಿಕದಲ್ಲಿ ಮೇಳೈಸಿದ 18ನೇ ವಿಶ್ವ ಒಕ್ಕಲಿಗ ಮಹಾ ಸಮ್ಮೇಳನ : ಸಾಂಸ್ಕೃತಿಕ ಕಾರ್ಯಕ್ರಮ ಕಲರವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸ್ಯಾನ್‌ಹೋಸೆ: ಒಕ್ಕಲಿಗ ಎನ್ನುವುದು ಅಸ್ಮಿತೆ, ಗೌರವ. ಅದು ಒಂದು ಜನಾಂಗದ ಸಂಸ್ಕೃತಿಯೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಅಮೆರಿಕದ ಸ್ಯಾನ್‌ಹೋಸೆ ನಗರದ ಮೆಕನರಿ ಕನ್ವೆನ್ಷನ್ ಸೆಂಟರ್‌ನಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ 18ನೇ ವಿಶ್ವ ಒಕ್ಕಲಿಗ ಮಹಾಸಮ್ಮೇಳನಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿದ ಅವರು, ಒಕ್ಕಲಿಗ ಜನಾಂಗದಲ್ಲಿ ಒಂದು ಶಕ್ತಿಯಿದೆ. ಸಮಾಜದ ಅನೇಕರು ರಾಜ್ಯ, ರಾಷ್ಟ್ರವನ್ನು ಆಳಿದ್ದಾರೆ. ನಾಯಕರು ಕೇವಲ ತಮ್ಮ ಬದುಕು ಕಟ್ಟಿಕೊಟ್ಟಳ್ಳಲು ಶ್ರಮಿಸಿದವರಲ್ಲ, ಬದಲಾಗಿ, ಸಮಾಜ, ನಾಡು, ದೇಶಕ್ಕೆ ಏನಾದರೂ ಕೊಡುಗೆ ನೀಡಬೇಕೆಂದು ಶ್ರಮಿಸಿದವರೆಂದು ಬಣ್ಣಿಸಿದರು.

ನೀವೂ ಕೂಡ ಅಲ್ಲಿಂದ ದೂರದ ಇಲ್ಲಿಗೆ ಬಂದು ಒಂದು ಸಂಘ ಕಟ್ಟಿಕೊಂಡು ಒಕ್ಕಲಿಗ ಜನಾಂಗದ ಶಕ್ತಿ, ಸಂಪ್ರದಾಯ, ಸಂಸ್ಕೃತಿಯನ್ನು ಅನಾವರಣ ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ. ಒಕ್ಕಲಿಗ ಜನಾಂಗದ ಎಲ್ಲವೂ ಮುಂದಿನ ಪೀಳಿಗೆಗೆ ವರ್ಗಾವಣೆ ಆಗಬೇಕು ಹಾಗೂ ಮುಂದುವರಿಯಬೇಕೆಂದರೆ ಈ ರೀತಿಯ ಕಾರ್ಯಕ್ರಮ ಹೆಚ್ಚು ನಡೆಯಬೇಕೆಂದರು.

ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಮಾಜಮುಖಿ ಹಬ್ಬವಾಗಿ ರೂಪುಗೊಂಡಿರುವ ಈ ಕಾರ್ಯಕ್ರಮವು ವಿಶ್ವದ ವಿವಿಧೆಡೆ ನೆಲೆಸಿರುವ ಒಕ್ಕಲಿಗ ಸಮುದಾಯದ ಬಂಧುಗಳನ್ನು ಒಂದೆಡೆ ಸೇರಿಸಿರುವ ಅಪೂರ್ವ ಸನ್ನಿವೇಶವಾಗಿದೆ ಎಂದರು.

ಒಕ್ಕಲುತನ ಮಾಡುವ ಒಕ್ಕಲಿಗರು ಇಂದು ತಮ್ಮ ಜ್ಞಾನ, ಸ್ವಸಾಮರ್ಥ್ಯದಿಂದ ಸಮಾಜದಲ್ಲಿ ಉನ್ನತ ಸ್ಥಾನಮಾನ ಅಲಂಕರಿಸಿದ್ದಾರೆ. ತಮ್ಮ ಜ್ಞಾನ ಭಂಡಾರದಿಂದಲೇ ಅಮೇರಿಕಾ, ಯುರೋಪ್ ಸೇರಿ ಅನೇಕ ದೇಶಗಳಲ್ಲಿ ನೆಲೆಸಿದ್ದಾರೆ. ತಂತ್ರಜ್ಞಾನ ಹುದ್ದೆಗಳು, ಉದ್ಯಮ, ವ್ಯವಹಾರ ಸೇರಿ ಅನೇಕ ಕೆಲಸ ಮಾಡುತ್ತಿದ್ದಾರೆ. ತಾವು ನೆಲೆಸಿರುವ ದೇಶ ಮತ್ತು ತಾಯ್ನಾಡು ಭಾರತಕ್ಕೆ ತಮ್ಮದೇಯಾದ ಮಹತ್ವದ ಕೊಡುಗೆಗಳನ್ನು ನೀಡುತ್ತಿದ್ದಾರೆ. ತಮ್ಮ ಊರಿನಿಂದ ಸಾವಿರಾರು ಕಿ.ಮೀ. ದೂರದ ಊರಿಗೆ ಬಂದಿದ್ದರೂ ಸಮುದಾಯ ಮತ್ತು ಕನ್ನಡ ನಾಡಿನ ಸಂಸ್ಕೃತಿ, ಪರಂಪರೆ, ಗೌರವಯನ್ನು ಉಳಿಸಿ ಬೆಳೆಸುತ್ತಿರುವುದು ಸಂತೋಷದ ಸಂಗತಿ ಎಂದರು.

ಮಾಜಿ ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ ನಾರಾಯಣ್ ಮಾತನಾಡಿ, ಸಂಸ್ಕೃತಿ, ಕಲೆ, ಪರಂಪರೆಯ ಪ್ರದರ್ಶನದ ಜೊತೆಗೆ ವ್ಯಾಪಾರ ಉದ್ಯಮ ಸ್ಥಾಪನೆ, ವಿಸ್ತರಣೆ, ಸ್ಟಾರ್ಟಪ್ ಐಡಿಯಾಗಳು, ನೆಟ್ವರ್ಕಿಂಗ್, ಅಮೇರಿಕಾದಲ್ಲಿರುವ ಹೊಸ ಅವಕಾಶಗಳನ್ನು ಬಳಸಿಕೊಂಡು ಅಭಿವೃದ್ಧಿ ಕಾಣಲು ಈ ಸಮ್ಮೇಳನ ಮಹತ್ವದ ಪಾತ್ರ ವಹಿಸುತ್ತದೆ. ಅಮೇರಿಕಾದಲ್ಲಿ ನೆಲೆಸಿರುವವರು, ಕರ್ನಾಟಕ ಸೇರಿ ಜಗತ್ತಿನ ನಾನಾ ಭಾಗಗಳಿಂದ ಆಗಮಿಸಿರುವವರು ಕಾರ್ಯಕ್ರಮದ ಪ್ರಯೋಜನ ಪಡೆದು ಮತ್ತಷ್ಟು ಅಭಿವೃದ್ಧಿ ಕಾಣುವ ವಿಶ್ವಾಸವಿದೆ ಎಂದು ಹೇಳಿದರು.

ಮಾಜಿ ಸಂಸದ ಸಿ.ಎಸ್. ಪುಟ್ಟರಾಜು ಮಾತನಾಡಿ, ಅಮೆರಿಕದಲ್ಲಿ ಒಕ್ಕಲಿಗ ಸಮುದಾಯದವರು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸೇರಿ ನಮ್ಮ ಸಂಸ್ಕೃತಿ, ಕಲೆ, ಪರಂಪರೆಯ ಪ್ರದರ್ಶನದ ಜೊತೆಗೆ ಉದ್ಯಮ ಅವಕಾಶಗಳು, ಬೆಳವಣಿಗೆ ಕುರಿತು ಚರ್ಚಿಸುವುದು ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ವಿಶ್ವದ ನಾನಾ ಭಾಗಗಳಿಂದ ಆಗಮಿಸಿರುವ ಒಕ್ಕಲಿಗ ಸಮುದಾಯದ ಸದಸ್ಯರು, ವೈವಿಧ್ಯಮಯ ಸಂಸ್ಕೃತಿ, ಪರಂಪರೆ, ಉತ್ಸವವನ್ನು ಅರ್ಥಪೂರ್ಣವಾಗಿ ಆಯೋಜಿಸಿದ್ದಾರೆ. ಒಕ್ಕಲಿಗರ ಸಂಸ್ಕೃತಿಯ ಬಣ್ಣನೆ, ಭಕ್ತಿಯ ಮೆರವಣಿಗೆ, ಸುಗ್ಗಿ ಕುಣಿತ, ದೇವರ ಉತ್ಸವ, ಕೋಲಾಟ, ವೇಷ ಭೂಷಣ ಪ್ರದರ್ಶನಗಳು ಸ್ಯಾನ್‌ಹೋಸೆ ರಸ್ತೆಗಳಲ್ಲಿ ಅಕ್ಷರಶಃ ಜಾತ್ರಾ ಉತ್ಸವ ಅನುಭವ ನೀಡಿದವು.

ಮಹಾ ಸಮ್ಮೇಳನದಲ್ಲಿ ವಿಶ್ವ ವಿಖ್ಯಾತ, ಅಂತಾರಾಷ್ಟ್ರೀಯ ಖ್ಯಾತಿಯ ನಡೆದಾಡುವ ವೈಯಲಿನಿಸ್ಟ್ ಡಾ. ರಾಮಿನೇಶ್ ಹಾಗು ದಿವ್ಯಾ ರಾಮಚಂದ್ರ ಜುಗಲ್ ಬಂಧಿ ಗಮನ ಸೆಳೆಯಿತು.

ಸಂಸದ ಡಾ. ಕೆ. ಸುಧಾಕರ್, ಶಾಸಕರಾದ ಎಸ್.ಟಿ. ಸೋಮಶೇಖರ್, ಸತೀಶ್ ರೆಡ್ಡಿ, ಗುಬ್ಬಿ ಶ್ರೀನಿವಾಸ್ ಹಾಗೂ ಒಕ್ಕಲಿಗ ಸಮುದಾಯದ ಮುಖಂಡ ಸಚ್ಚಿದಾನಂದ, ವಿಶ್ವ ಒಕ್ಕಲಿಗ ಪರಿಷತ್ ಆಫ್ ಅಮೆರಿಲ ಅಧ್ಯಕ್ಷ ಧನಂಜಯ್ ಮತ್ತಿತರರಿದ್ದರು.

# ಎಐ ಫಲಿತಾಂಶ ಪರಿಶೀಲನೆ ಅಗತ್ಯವಿದೆ: ಕೆ. ಮೌನೇಶ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಕೃತಕ ಬುದ್ಧಿಮತ್ತೆ (ಎಐ) ಮತ್ತು ಮೆಷಿನ್ ಲರ್ನಿಂಗ್ ಮಾಡೆಲ್‌ಗಳಿಂದ ದೊರೆಯುವ ಫಲಿತಾಂಶವನ್ನು ಮನುಷ್ಯರ ಬುದ್ಧಿವಂತೆ ಬಳಸಿ ಪರಿಶೀಲಿಸಬೇಕಾದ ಅಗತ್ಯತೆಯಿದೆ ಎಂದು ಕ್ಯಾಪ್ ಜೆಮಿನಿ ಸಂಸ್ಥೆಯ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಹಿರಿಯ ತಜ್ಞ ಕೆ. ಮೌನೇಶ್ ಅಭಿಪ್ರಾಯಪಟ್ಟರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿರುವ ಕಂಪ್ಯೂಟಿಂಗ್ ತಂತ್ರಜ್ಞಾನ ಮತ್ತು ದತ್ತಾಂಶ ಸಂವಹನ ಕುರಿತ ಎರಡು ದಿನಗಳ ಐಇಇಇ (ಇನ್‌ಸ್ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರ್ಸ್) 2 ದಿನಗಳ ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಶುಕ್ರವಾರ ಉಪನ್ಯಾಸ ನೀಡಿದರು.

ಕೃತಕ ಬುದ್ಧಿಮತ್ತೆ ಮತ್ತು ಮೆಷಿನ್ ಲರ್ನಿಂಗ್ ಮಾಡೆಲ್‌ಗಳಲ್ಲಿ ಪೂರ್ವಾಗ್ರಹ ಅಂತರ್ಗತವಾಗಿರುವುದರಿಂದ ನೀಡುವ ಫಲಿತಾಂಶವನ್ನು ಯಥಾವತ್ತಾಗಿ ಸ್ವೀಕರಿಸಲು ಸಾಧ್ಯವಿಲ್ಲ. ಎಐಗಳ ಕಾರ್ಯಕ್ಷಮತೆ ಅವುಗಳಿಗೆ ನೀಡುವ ದತ್ತಾಂಶದ ಮೇಲೆ ಅವಲಂಬಿತವಾಗಿರುತ್ತದೆ. ಇಂದು ಜಗತ್ತನ್ನು ಆಳುತ್ತಿರುವುದು ದತ್ತಾಂಶ. ನಾವು ಬಳಸುತ್ತಿರುವ ಸಾಮಾಜಿಕ ತಾಣಗಳು ಸಹ ದತ್ತಾಂಶದ ಮೇಲೆ ಅವಲಂಬಿತವಾಗಿವೆ ಎಂದರು.

ಕಾರ್ಪೋರೇಟ್ ವ್ಯವಹಾರಗಳ ಡೀನ್ ಡಾ. ಗೀತಾ ಕಿರಣ್ ಮಾತನಾಡಿ, ವಿಚಾರ ಸಂಕಿರಣದಲ್ಲಿ ಮಂಡಿಸುವ ಸಲುವಾಗಿ ಜಗತ್ತಿನ ವಿವಿಧೆಡೆಗಳಿಂದ 2,396 ಸಂಶೋಧನಾ ಪ್ರಬಂಧಗಳು ಸಲ್ಲಿಕೆಯಾಗಿದ್ದವು. ಅವುಗಳಲ್ಲಿ 423 ಪ್ರಬಂಧಗಳನ್ನು ಮಾತ್ರ ಪ್ರಕಟಣೆಗೆ ಸ್ವೀಕರಿಸಲಾಗಿದೆಯೆಂದು ಹೇಳಿದರು.

ಥಾಯ್ಲೆಂಡ್ ನಕಿಂಗ್ ಮಾಂಗ್ ಕುಟ್ಸ್ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ವಾಚಾರಾ ರುವಾಂಗ್‌ಸಂಗ್ ಅವರು, ವೈದಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ವಿಷಯ ಕುರಿತು ಉಪನ್ಯಾಸ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ ಮಾತನಾಡಿ, ಭವಿಷ್ಯದಲ್ಲಿ ತಯಾರಿಯ ವೃತ್ತಿಪರರನ್ನು ರೂಪಿಸುವಲ್ಲಿ ಇಂತಹ ಕಾರ್ಯಾಗಾರಗಳು ರಾಷ್ಟ್ರ-ಅಂತರಾಷ್ಟ್ರೀಯ ಮಟ್ಟದಲ್ಲಿ ಶೈಕ್ಷಣಿಕ ಶ್ರೇಷ್ಠತೆ ಹಾಗೂ ಜ್ಞಾನ ನಿಡುತ್ತದೆ ಎಂದರು.

ಎಂಟಿಇಎಸ್ ಪ್ರಧಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ಅವರು ಮಾತನಾಡಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಗತಿಯಾಗಬೇಕಾದರೆ ಸಂಶೋಧನೆಗಳಾಗಬೇಕು. ಕೈಗಾರಿಕಾ ತಜ್ಞರು, ಶೈಕ್ಷಣಿಕ ಪರಿಣತರು ವಿದ್ಯಾರ್ಥಿಗಳಿಗೆ ಹೊಸ ಆಲೋಚನೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರಣೆಯಾಗಬೇಕೆಂದರು.

ಪ್ರಾಂಶುಪಾಲ ಡಾ. ಎ.ಜೆ. ಕೃಷ್ಣಯ್ಯ, ಪ್ರಾಧ್ಯಾಪಕ ಡಾ. ಪಿ.ಸಿ. ಶ್ರೀಕಾಂತ್, ಮೈಸೂರು ಜೆಎಸ್‌ಎಸ್ ಕಾಲೇಜು ಎಂಸಿಎ ವಿಭಾಗ ಮುಖ್ಯಸ್ಥೆ ಡಾ. ಆರ್.ಕೆ. ಭಾರತಿ, ನವಕೀಸ್ ಕಾಲೇಜು ಪ್ರಾಧ್ಯಾಪಕಿ ಡಾ. ವೀನುತಾ ಮತ್ತಿತರರಿದ್ದರು. ವಿಚಾರ ಸಂಕಿರಣದಲ್ಲಿ ಮಂಡನೆಯಾಗಲಿರುವ ಪ್ರಬಂಧ ಒಳಗೊಂಡಿರುವ ಪುಸ್ತಕ ಬಿಡುಗಡೆ ಮಾಡಲಾಯಿತು.

# ನವಿಲೆ ಗ್ರಾ.ಪಂ.ಗೆ ಪವಿತ್ರ ಪರಮೇಶ್ ಅಧ್ಯಕ್ಷೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ನವಿಲೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ಪ್ರಕ್ರಿಯೆ ನಡೆಯಿತು.

ನವಿಲೆ ಹೊಸೂರು ಗ್ರಾಮದ ಎಸ್.ಡಿ. ಪವಿತ್ರ ಪರಮೇಶ್ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ ನಂಜುಂಡಸ್ವಾಮಿ ಅವಿರೋಧ ಆಯ್ಕೆಯಾದರು.

ಈ ಹಿಂದಿನ ಅವಧಿಯ ಅಧ್ಯಕ್ಷೆ ಜ್ಯೋತಿ ಬಸವರಾಜ್ ಹಾಗೂ ಉಪಾಧ್ಯಕ್ಷ ರಾಮೇಗೌಡ ರಾಜೀನಾಮೆ ನೀಡಿದ್ದರಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು. ಚುನಾವಣಾಧಿಕಾರಿ ಹರೀಶ್ ಅವಿರೋಧ ಆಯ್ಕೆ ಘೋಷಿಸಿದರು.


ನೂತನ ಉಪಾಧ್ಯಕ್ಷ ನಂಜುಂಡಸ್ವಾಮಿ ಮಾತನಾಡಿ, ಶಾಸಕ ಸಿ.ಎನ್. ಬಾಲಕೃಷ್ಣ ಅವರ ಸಲಹೆ ಹಾಗೂ ಸಹಕಾರ ಪಡೆದು ಅಭಿವೃದ್ಧಿ ಕೆಲಸಗಳಿಗೆ ಅದ್ಯತೆ ನೀಡಲಾಗುವುದು.



ನವಿಲೆ ಗ್ರಾಮದಲ್ಲಿರುವ ಪುರಾಣ ಪ್ರಸಿದ್ಧ ನವಿಲೆ ನಾಗೇಶ್ವರ ಸ್ವಾಮಿ ದೇವಾಲಯಕ್ಕೆ ಪ್ರತಿನಿತ್ಯ ಬರುವ ಭಕ್ತರ ಅನುಕೂಲಕ್ಕಾಗಿ ರಸ್ತೆ, ಕುಡಿಯುವ ನೀರು, ಸ್ವಚ್ಛತೆಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕೆಲಸಗಳಿಗೆ ಆದ್ಯತೆ ನೀಡುವುದಾಗಿ ತಿಳಿಸಿದರು.

ಕೃಷಿ ಪತ್ತಿನ ಅಧ್ಯಕ್ಷ ಕುಮಾರಸ್ವಾಮಿ, ತಗಡೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಹೇಮರಾಜ್, ಕೃಷಿ ಪತ್ತಿನ ಮಾಜಿ ಅಧ್ಯಕ್ಷ ಎನ್.ಬಿ. ನಾಗರಾಜ್, ಪಿಡಿಒ ದೇವರಾಜ್, ಗ್ರಾಮ ಪಂಚಾಯಿತಿ ಸದಸ್ಯರಾದ ರಂಗೇಗೌಡ, ಪ್ರೇಮಲತಾ ದಿನೇಶ್, ಪ್ರದೀಪ್, ಎನ್.ಬಿ. ಸೋಮಶೇಖರ್, ರಾಜಲಕ್ಷ್ಮಿ ನಾಗರಾಜ್, ಎನ್.ಸಿ. ರವೀಶ್, ಕೆ.ಆರ್. ಸುಜಾತಾ ಬಸವರಾಜ್, ಮುಖಂಡರಾದ ದೇವರಾಜು, ಎನ್.ಕೆ. ನಾಗಪ್ಪ, ನವಿಲೆ ಹೊಸೂರು ಬಸವರಾಜ್, ದಿನೇಶ್ ಮತ್ತಿತರರಿದ್ದರು.

# ಸಾಹಿತ್ಯಾಭಿಮಾನಿಗಳಿಗೆ ರುಚಿಸುವ ಮಂತಣ




**- ರಜನೀಶ್ ಸಾಗರ**

ಕಳೆದ ಹತ್ತಾರು ವರ್ಷಗಳ ಅವಧಿಯಲ್ಲಿ ಶತಾವಧಾನಿ ಗಣೇಶ ಅವರು ಬರೆದ ಏಳು ಲೇಖನಗಳ ಸಂಚಯ ಮಂತಣ. ಇದು ಪ್ರಧಾನವಾಗಿ ಸಾಹಿತ್ಯವನ್ನು ಸಾಹಿತ್ಯ ಮೀಮಾಂಸೆಯನ್ನು ಕುರಿತಿದೆ. ಇಲ್ಲಿ ಕನ್ನಡ, ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಳ ಸಾಹಿತ್ಯದ ಸಾಹಚರ್ಯವಿದೆ. ಈ ಲೇಖನಗಳೊಡನೆ ಡಾ. ಸಂಧ್ಯಾ ಹೆಗಡೆ ಅವರು ಉದಯವಾಣಿ ಪತ್ರಿಕೆಗಾಗಿ ನಡೆಸಿದ ಶತಾವಧಾನಿ ಗಣೇಶ ಅವರ ಸಂದರ್ಶನವೂ ಸೇರಿದೆ. ಸಾಹಿತ್ಯವನ್ನೇ ಅನುಲಕ್ಷಿಸಿದ ಈ ಸಂದರ್ಶನ ಪ್ರಕೃತ ಲೇಖನ ಸಂಗ್ರಹಕ್ಕೆ ಪೂರಕವಾದ ಆಶಯದಿಂದ ಇದಿಲ್ಲಿ ಸೇರ್ಪಡೆಯಾಗಿದೆ. ಮಂತಣ ಎಂಬ ಶಬ್ದ ಸಂಸ್ಕೃತದ ಮಂತ್ರಣ ಮತ್ತು ಮಂಥನ ಪದಗಳ ತದ್ಭವ. ಇದಕ್ಕೆ ಮಂತ್ರಾಲೋಚನೆ, ಆಪ್ತರ ಒಡನಾಟದ ಮಾತು. ಮಥನ ಮುಂತಾದ ಅರ್ಥಗಳಿವೆ ಸಾಹಿತ್ಯ ಚಿಂತನವೆಂದರೆ ಇದೇ ತಾನೇ. ಮಂತಣ ಏಳು ಸಾಹಿತ್ಯ ಚಿಂತನೆಗಳ ಸಂಕಲನ. ಇಲ್ಲಿ ಭಾಷೆ, ಕಾವ್ಯ, ಮೀಮಾಂಸೆ, ತೌಲನಿಕ ವಿಮರ್ಶೆ, ಅನುವಾದ, ವ್ಯಕ್ತಿ ಚಿತ್ರ ಮುಂತಾದ ವಿಷಯಗಳನ್ನು ಕುರಿತು ಗಂಭೀರ ಅಧ್ಯಯನವಿದೆ. ಇಲ್ಲಿಯ ಸಮಾಲೋಚನೆ ಕನ್ನಡ, ಸಂಸ್ಕೃತ, ಇಂಗ್ಲಿಷ್ ಮುಂತಾದ ಭಾಷೆಗಳ ಹಾಗೂ ಸಾಹಿತ್ಯ ತತ್ವಗಳ ಒಳ-ಹೊರಗುಗಳನ್ನು ಆಶ್ರಯಿಸಿ ಸ್ವೋಪಜ್ಞ ಚಿಂತನವಾಗಿ ಬೆಳೆದಿದೆ. ಅನುಬಂಧವಾಗಿ ಬಂದಿರುವ ಲೇಖಕರ ಸಂದರ್ಶನ ಸದ್ಯದ ಲೇಖನಗಳಿಗೆ ಪೂರಕವಾಗಿದೆ.

ಮಂತಣದ ಲೇಖಕರು ಶತಾವಧಾನಿ ಡಾ. ಆರ್. ಗಣೇಶ್ ಅನೇಕ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದವರು. ಭಾರತೀಯ ಸಾಹಿತ್ಯ, ಸಂಸ್ಕೃತಿ, ವಿಜ್ಞಾನ, ಆಧ್ಯಾತ್ಮ, ಕಲೆ ಇತಿಹಾಸಗಳಲ್ಲಿ ಗಾಢ ಪ್ರೀತಿ. ಅಲಂಕಾರ, ಛಂದಸ್ಸು, ವೇದ, ವೇದಾಂತ, ವ್ಯಾಕರಣ, ಧರ್ಮಶಾಸ್ತ್ರ, ನೃತ್ಯ, ನಾಟಕ, ಯಕ್ಷಗಾನ, ಚಿತ್ರಶಿಲ್ಪ, ಸಂಗೀತಾದಿಗಳಲ್ಲಿ ಅಪಾರ ಜ್ಞಾನ ಉಳ್ಳವರು. ಸಾವಿರಕ್ಕೂ ಹೆಚ್ಚು ಅಷ್ಟಾವಧಾನ, ಐದು ಶತಾವಧಾನಗಳನ್ನು ಇದುವರೆಗೆ ನಡೆಸಿಕೊಟ್ಟವರು.

ಕರ್ನಾಟಕ ರಾಜ್ಯದ ರಾಜ್ಯೋತ್ಸವ ಪ್ರಶಸ್ತಿ ಪಡೆದಂತ ಕನ್ನಡದ ಅಪರೂಪದ ಲೇಖಕರು. ಕೃತಿಯು 200 ಪುಟಗಳನ್ನು ಹೊಂದಿದ್ದು 250 ರೂಪಾಯಿ ಮುಖಬೆಲೆ ಹೊಂದಿದೆ. ಆಸಕ್ತ ಓದುಗರಿಗೆ ರವೀಂದ್ರ ಪುಸ್ತಕಾಲಯ, ಸಾಗರದಲ್ಲಿ ರಿಯಾಯಿತಿ ದರದಲ್ಲಿ ದೊರಕುತ್ತದೆ.

# ಮುರಾರ್ಜಿ ದೇಸಾಯಿ ವಸತಿ ಶಾಲೆ ಉದ್ಘಾಟನೆ ಇಂದು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಸೋಮವಾರ ಸಂತೆ ಬಳಿ ನಿರ್ಮಾಣಗೊಂಡಿರುವ ಮುರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಜು. 6ರ ಭಾನುವಾರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಲೋಕಾರ್ಪಣೆ ಮಾಡಲಿದ್ದಾರೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ವಸತಿ ಶಾಲೆಗೆ ಭೇಟಿ ನೀಡಿ ನೂತನ ಕಟ್ಟಡ ಪರಿಶೀಲಿಸಿ ಮಾತನಾಡಿದ ಅವರು, ಮುರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾರಂಭಗೊಳಿಸುವಂತೆ ಮಕ್ಕಳ ಪೋಷಕರು ಅನೇಕ ದಿನಗಳಿಂದ ಒತ್ತಾಯಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಕ್ರೈಸ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಶೀಘ್ರ ಉದ್ಘಾಟನೆಗೆ ದಿನಾಂಕ ತಿಳಿಸುವಂತೆ ತಿಳಿಸಲಾಗಿತ್ತು. ಅದರಂತೆ ಜು.6 ರ ಭಾನುವಾರ ಉದ್ಘಾಟನೆಗೊಳ್ಳಲಿದೆ ಎಂದರು.

ಮಕ್ಕಳಿಗೆ ಶೈಕ್ಷಣಿಕವಾಗಿ ಉತ್ತಮ ಶಿಕ್ಷಣ ಹಾಗೂ ವಸತಿ ಸಿಗಲೆಂದು ಬಾಲಕರ ಹಾಗೂ ಬಾಲಕಿಯರ ವಸತಿ



ಶಾಲೆಯನ್ನು 13.50 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಆದರೆ ಕೆಲವೊಂದು ಸಮಸ್ಯೆಗಳಿಂದ ಉದ್ಘಾಟನೆ ವಿಳಂಬವಾಗಿದೆ. ಮಕ್ಕಳ ಹಿತದೃಷ್ಟಿಯಿಂದ ಈ ಹಿಂದೆ ಇದೇ ಶಾಲೆಯ ಮಕ್ಕಳನ್ನು ಚನ್ನರಾಯಪಟ್ಟಣ ಬಳಿ ಇರುವ ಗೂರವಾರನಹಳ್ಳಿ ಮುರಾರ್ಜಿ ವಸತಿ ಶಾಲೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು ಎಂದು ತಿಳಿಸಿದರು.

ಹೆಚ್ಚಿನ ಮಕ್ಕಳು ಒಂದೇ ಕಡೆಯಲ್ಲಿ ಇದುದ್ದರಿಂದ ಕೆಲವು ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀಳುವ ದೃಷ್ಟಿಯಿಂದ ನೂತನ ವಸತಿ ಶಾಲೆಗೆ ಈ ವರ್ಷದ ಶೈಕ್ಷಣಿಕ ವರ್ಷದಿಂದಲೇ ಶಾಲೆಯನ್ನು ಆರಂಭಿಸಲಾಗಿದೆ. ಅದರಿಂದ ಮಕ್ಕಳು ಉತ್ತಮ ವಾತಾವರಣದಲ್ಲಿ ಶಿಕ್ಷಣ ಪಡೆಯಬಹುದಾಗಿದೆ ಎಂದರು.

ಶೀಘ್ರ ಸೌಲಭ್ಯ ಕಲ್ಪಿಸುವಂತೆ ಸೂಚನೆ: ವಸತಿ ಶಾಲೆಯ ಕಟ್ಟಡದ ಕಾಮಗಾರಿ ಸಂಪೂರ್ಣ ಮುಗಿದಿದ್ದು ಸ್ವಲ್ಪ ಪ್ರಮಾಣದಲ್ಲಿ ಕಾಂಪೌಂಡ್ ಸೇರಿ ಕೆಲವು ಕೆಲಸಗಳು ಬಾಕಿ ಉಳಿದಿವೆ. ಈ ಬಗ್ಗೆ ಗುತ್ತಿಗೆದಾರರಿಗೆ ಶೀಘ್ರ ಕಾಮಗಾರಿ ಪೂರ್ಣಗೊಳಿಸುವಂತೆ ತಿಳಿಸಲಾಗಿದೆ. ಜೊತೆಗೆ ಕ್ರೈಸ್ ಅಧಿಕಾರಿಗಳಿಗೆ ಮಕ್ಕಳ ವಸತಿಗೆ ಬೇಕಾಗಿರುವ ಮಲಗುವ ಕಾಟ್‌ಗಳು, ಬೋಧನಾ ಶಾಲೆಗೆ ಡೆಸ್ಕ್ ಮತ್ತು ಡೈನಿಂಗ್ ಟೇಬಲ್ ಸೇರಿ ವಿವಿಧ ಸೌಲಭ್ಯಗಳನ್ನು 1 ತಿಂಗಳೊಳಗೆ ಕಲ್ಪಿಸುವಂತೆ ತಿಳಿಸಲಾಗಿದೆ. ಈ ಬಗ್ಗೆ ಅಧಿಕಾರಿಗಳು ಗಮನ ಹರಿಸಬೇಕೆಂದರು.

ಗುತ್ತಿಗೆದಾರ ಪ್ರಸನ್ನ ಕುಮಾರ್ ಮಾತನಾಡಿ, ಕಳೆದ 3 ವರ್ಷಗಳ ಹಿಂದೆಯೇ ಕಟ್ಟಡದ ಕಾಮಗಾರಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲಾಗಿದೆ. ಆದರೆ ವಸತಿ ಶಾಲೆಯ ಅಕ್ಕಪಕ್ಕದ ರೈತರು ಕಾಂಪೌಂಡ್ ನಿರ್ಮಾಣಕ್ಕೆ ಅಡ್ಡಿಪಡಿಸಿದ್ದರಿಂದ ಕಾಮಗಾರಿ ಸ್ಥಗಿತಗೊಂಡಿತು. ಇದರಿಂದ ನಮಗೂ ನಷ್ಟವಾಗಿದೆ. ಕ್ರೈಸ್ ಇಲಾಖೆಯಿಂದ ಸುಮಾರು 4 ಕೋಟಿ ರೂ. ಬಿಡುಗಡೆಯಾಗಬೇಕಾಗಿದೆ. ಈ ಬಗ್ಗೆ ಶಾಸಕರು ಸಮಸ್ಯೆ ಬಗೆಹರಿಸಿ ಕಾಂಪೌಂಡ್ ನಿರ್ಮಾಣಕ್ಕೆ ಹೆಚ್ಚಿನ ಸಹಕಾರ ನೀಡುವಂತೆ ಮನವಿ ಮಾಡಿದರು.

ಕ್ರೈಸ್‌ನ ಸೂಪರಿಡೆಂಟ್ ಎಂಜಿನಿಯರ್ ಜನಾರ್ಧನ್, ಕಾರ್ಯಪಾಲಕ ಅಭಿಯಂತರರಾದ ಪಂಪಾಪತಿ, ಸಹಾಯಕ ಕಾರ್ಯಪಾಲಕ ಅಭಿಯಂತರ ನಟರಾಜ್, ಸಹಾಯಕ ಅಭಿಯಂತರ ಮಹೇಶ್, ಗುತ್ತೀಗೆದಾರ ಪ್ರಸನ್ನಕುಮಾರ್, ಚೆಸ್ಕಾಂ ಎಂಜಿನಿಯರ್ ಹರೀಶ್ ಮತ್ತಿತರರಿದ್ದರು.

# ಜೀವನಶೈಲಿ ಬದಲಿಸಿಕೊಳ್ಳಲು ಸಲಹೆ



ಕೋಣನೂರು: ಆರೋಗ್ಯ ದೃಷ್ಟಿಯಿಂದ ಜೀವನ ಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆಂದು ಸಮುದಾಯ ಆರೋಗ್ಯ ಕೇಂದ್ರದ ಎನ್‌ಸಿಡಿ ವಿಭಾಗ ಆಪ್ತ ಸಮಾಲೋಚಕ ಕಮಲೇಶ್ ಹೇಳಿದರು.

ಪಟ್ಟಣದ ಮೌಲಾನಾ ಆಜಾದ್ ಮಾದರಿ ಶಾಲೆಯಲ್ಲಿ ಸಮುದಾಯ ಆರೋಗ್ಯ ಕೇಂದ್ರದ ಎನ್‌ಸಿಡಿ ವಿಭಾಗದಿಂದ ಶುಕ್ರವಾರ ಏರ್ಪಡಿಸಿದ್ದ ಆರೋಗ್ಯ ಅರಿವು ಜಾಥಾಗೆ ಚಾಲನೆ ನೀಡಿ ಮಾತನಾಡಿ, ಜಿಲ್ಲೆಯಲ್ಲಿ ಹೃದಯಾಘಾತ ಪ್ರಕರಣಗಳು ಹೆಚ್ಚುತ್ತಿದೆ. ಮಕ್ಕಳು ಮತ್ತು ಯುವಕರೇ ಅಧಿಕ ಸಂಖ್ಯೆಯಲ್ಲಿ ಮೃತಪಡುತ್ತಿದ್ದಾರೆ ಎಂದರು.

ಹೃದಯಾಘಾತ ಪ್ರಕರಣ ಕುರಿತು ಭಯಪಡುವುದು ಬೇಡ. ಪೌಷ್ಟಿಕಾಂಶಯುಕ್ತ ಆಹಾರ ಪದ್ಧತಿ ಅನುಸರಿಸಿ ನಿತ್ಯ ವ್ಯಾಯಾಮ, ಯೋಗಾಸನ ಮಾಡಬೇಕು. ಗೋಬಿ, ಪಾನಿಪೂರಿ ಸೇರಿ ಮತ್ತಿತರ ಜಂಕ್‌ಫುಡ್ ಸೇವಿಸುವುದನ್ನು ತ್ಯಜಿಸಬೇಕು. ವಿದ್ಯಾರ್ಥಿಗಳು ಆರೋಗ್ಯ ಶಿಕ್ಷಣಕ್ಕೂ ಆದ್ಯತೆ ನೀಡಬೇಕೆಂದು ಸಲಹೆ ನೀಡಿದರು.

ಮುಖ್ಯ ಶಿಕ್ಷಕ ವಿಶ್ವನಾಥ್, ಸಹ ಶಿಕ್ಷಕರಾದ ಚೇತನ್, ದರ್ಶನ್, ಸಮೀರ್, ಪ್ರೀತಿ, ಆಸ್ಪೀಯಾ ಹಾಗೂ ಇತರರಿದ್ದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿ ಸಾರ್ವಜನಿಕರಿಗೆ ಆರೋಗ್ಯದ ಅರಿವು ಮೂಡಿಸಲಾಯಿತು.

# ನಮಗೆ ರೋಗದ ಭಯವೇಕೆ..?



**ಚೇತನ್ ಗುರೂಜಿ,**
**ಬಸವ ಯೋಗ ಕೇಂದ್ರ, ಅಡಗೂರು**

ರಾಮ ನಡೆದ ದಾರಿ ರಾಮಾಯಣ, ರೋಗ ನಡೆದ ಮಾರ್ಗ ರೋಗಾಯಣ, ಭಗವಂತನೊಬ್ಬ ವ್ಯಂಗ್ಯ ಚಿತ್ರಕಾರ, ಮನುಜನ ಸಂತಸಕ್ಕೆ ಹಾಕಿದನು ರೋಗವೆಂಬ ಉಪ್ಪು-ಖಾರ. ಇತಿಹಾಸದ ಪುರಾಣಗಳನ್ನು ನೋಡಿದರೆ ರೋಗಗಳು ಸಹ ಮನುಷ್ಯನ ಹುಟ್ಟಿನೊಂದಿಗೆ ಹುಟ್ಟಿರುವಂತೆ ತೋರುತ್ತವೆ. ಆಯುರ್ವೇದದ ಕಾಲದಲ್ಲಿ ಮಧುಮೇಹ, ರಾಜಯಕ್ಷ್ಮ (ಟಿಬಿ) ಮುಂತಾದ ಕಾಯಿಲೆಗಳನ್ನು ದಾಖಲಿಸಿದ್ದಾರೆ. ನಾವು ಅವುಗಳನ್ನು ಮತ್ತೆ ರಿಸರ್ಚ್ ಮಾಡಿದ್ದೇವಷ್ಟೇ. ಆದರೆ ಆಗ ಅವುಗಳಿಗೆ ಇಷ್ಟೊಂದು ಪ್ರಚಾರ ಸಿಕ್ಕಿರಲಿಲ್ಲ. ಇದು ಪ್ರಚಾರ ಯುಗವಾದ್ದರಿಂದ ರೋಗಗಳಿಗೂ ಪ್ರಚಾರ ಸಿಕ್ಕಿದೆ. ಹೊಸ ಹೊಸ ರೋಗಗಳು ಹುಟ್ಟಿರುವುದು ಸುಳ್ಳಲ್ಲ. ಜೊತೆಗೆ ಹಳೆಯ ರೋಗಗಳನ್ನು ಅರ್ಥೈಸುವ ಭಾಷೆಗಳು ಸಹ ಕಾಲಕಾಲಕ್ಕೆ ಬದಲಾಗಿವೆ. ಹಿಂದೆ ರೋಗಗಳ ಬಗ್ಗೆ ಚಿಂತಿಸುತ್ತಾ ಕೂಡಲು ವೇಳೆಯಿರಲಿಲ್ಲ. ಮನುಜನಿಗೆ ಅವನ ಅನ್ನ ಬಟ್ಟೆಗಾಗಿ ದುಡಿಯುವುದರಲ್ಲಿ ಕಾಲ ಕಳೆದು ಹೋಗುತ್ತಿತ್ತು. ಈಗ ಆಧುನಿಕ ಮಾನವ ಸಿಕ್ಕಿರುವ ವೇಳೆಯನ್ನು ರೋಗದ ಬಗ್ಗೆ ಚಿಂತಿಸುವುದರಲ್ಲಿ ಹೆಚ್ಚು ಕಳೆಯುತ್ತಾನೆ. ಈಚೆಗೆ ಎಲ್ಲಾ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳಲ್ಲೂ ಸಾಮಾನ್ಯ ಜನರಿಗೆ ಅರ್ಥವಾಗಲೆಂದು ಎಲ್ಲಾ ಕಾಯಿಲೆಗಳ ಬಗ್ಗೆ ಬರೆಸಲು ಪ್ರಾರಂಭಿಸಿದ್ದಾರೆ. ಜನರು ರೋಗಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಲೆಂಬುದೇ ಅವರ ಅಭಿಲಾಷೆ.

ಎದೆ ನೋವೆ ಹೆದರಬೇಡಿ ಒಂದು ಲೇಖನದ ಶಿರೋನಾಮೆ, ಎದೆ ನೋವೆ ತಕ್ಷಣ ವೈದ್ಯರಿಗೆ ತೋರಿಸಿ ಮತ್ತೊಂದು ಲೇಖನದ ಶಿರೋನಾಮೆ. ಎರಡನ್ನು ಓದಿದ ಶ್ರೀಸಾಮಾನ್ಯನಿಗೆ ಗೊಂದಲ ಇದನ್ನು ಬರೆಯುವ ಲೇಖಕರ ಉದ್ದೇಶ ಒಳ್ಳೆಯದಿದ್ದರೂ ಸಾಮಾನ್ಯ ಜನರು ಅದನ್ನು ತಮ್ಮ ಅನುಭವ ತಿಳುವಳಿಕೆಗೆ ಅನುಗುಣವಾಗಿ ಅರ್ಥೈಸಿಕೊಂಡು ಹೆಚ್ಚು ಭೀತಿಯನ್ನೇ ಹೊಂದುತ್ತಾರೆ. ಭಯವನ್ನು ಪಡೆದೆ ರೋಗಗಳು ಬಂದಾಗ ಅವುಗಳನ್ನು ವಾಸಿ ಮಾಡಿಕೊಳ್ಳುವುದು ಹೇಗೆ ಎಂಬ ಯೋಚನೆ ತಲೆಯಲ್ಲಿ ಬಂದರೆ ಅರ್ಧ ವಾಸಿಯಾದಂತೆ . ಇನ್ನರ್ಧ ನಾವು ಸೇವಿಸುವ ಆಹಾರ ಮತ್ತು ದಿನಚರಿಯ ಬದಲಾವಣೆ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಬಹುದು.

## ಆಧುನಿಕ ಯುಕ್ತಿ ಹೀಗಿದೆ

ಇತ್ತೀಚಿನ ಜನರ ಮನಸ್ಥಿತಿ ಹೇಗಿದೆ ಎಂದರೆ ನಲವತ್ತಕೆ ಕನ್ನಡಕ ಬರದಿದ್ದರೆ ನಿನಗೆ ಏನೋ ಕೊರತೆ, ಇನ್ನೂ ಬಂದಿಲ್ಲವೇ ಸಿಹಿ ಮೂತ್ರ ರೋಗ ಹಾಗಾದರೆ ಏನೋ ಒರತೆ, ನಲವತ್ತಾದರೂ ಇನ್ನೂ ಬಂದಿಲ್ಲವೇ ಅಧಿಕ ರಕ್ತದೊತ್ತಡ. ಒತ್ತಡದ ಕಾಯಿಲೆಯಿಂದ ನರಳುತ್ತಿಲ್ಲವೇ ಇನ್ನೂ ಈ ಶರೀರವೆಂಬ ಕಟ್ಟಡ. ನಲವತ್ತಾದರೂ ಎಲ್ಲ ಅಂಗಗಳು ಸರಿಯಾಗಿದ್ದರೆ ನೀನೊಂದು ವಿಚಿತ್ರ ವ್ಯಕ್ತಿ ಮ್ಯೂಸಿಯಂನಲ್ಲಿ ಇಡಲು ಯೋಗ್ಯ ಎಂಬುದು ಆಧುನಿಕ ಉಕ್ತಿ.

ಯುಗ ಆಧುನಿಕವಾದರೇನಂತೆ? ಬರುತಿಹವು ಹೊಸ ಹೊಸ ರೋಗಗಳು ಕಂತೆ ಕಂತೆ ಹಳೆಯವುಗಳೊಡನೆ ಇವೂ ಸೇರಿ ನಡೆಸುತಿಹವು ಸಂತೆ. ಒಟ್ಟಿನಲ್ಲಿ ಯಾವ್ಯಾವ ಹೆಸರಿನಲ್ಲಿ ಕಾಯಿಲೆಗಳು ಬರುತ್ತಿವೆ ಎಂಬುದೇ ಗೊತ್ತಾಗಲಾರದಂತ ಪರಿಸ್ಥಿತಿಯನ್ನು ಆಧುನಿಕ ಮಾನವ ಎದುರಿಸುವ ಸ್ಥಿತಿಗೆ ಬಂದು ತಲುಪಿದ್ದಾನೆ.

ಹಿಂದೆ ಭಾರತೀಯನದ್ದೇ ಆದ ಒಂದು ವೈದ್ಯ ಪದ್ಧತಿ ಇತ್ತು. ಅದು ಎಲ್ಲಾ ವೈದ್ಯ ಪದ್ಧತಿಗಳಿಗಿಂತಲೂ ಹಳೆಯದು ಹಾಗೂ ಉತ್ಕೃಷ್ಟವಾಗಿತ್ತು. ಅಲ್ಲದೆ ಅದು ಅವನ ಜೀವನ ಪದ್ಧತಿಯು ಆಗಿತ್ತು. ಕಾಲಂತರದಲ್ಲಿ ಅದರ



ಪ್ರಭಾವ ಜನಮಾನಸದಿಂದ ಬಹಳಷ್ಟು ಅಂಶ ಮರೆಯಾಯಿತು. ಕಾರಣವನ್ನು ಇತಿಹಾಸಕಾರರೇ ಹೇಳಬೇಕಷ್ಟೆ. ಭಾರತೀಯನಿಗೆ ಹೇಳಿಕೊಡಲು ಬೇಕಾದಷ್ಟು ಭೂತಕಾಲವಿದೆ. ಆದರೆ ವರ್ತಮಾನ ಆಯುರ್ವೇದದ ಬಗ್ಗೆ ಹೆಮ್ಮೆಪಡುವ ಜನ ಎಷ್ಟು ಗಿಡಮೂಲಿಕೆಗಳನ್ನು ಗುರುತಿಸಬಲ್ಲೆವು. ಎಷ್ಟು ಜನ ದಿನಚರಿ ಋತುಚರಿಗಳ ಬಗ್ಗೆ ತಿಳುವಳಿಕೆ ಹೊಂದಿದ್ದೇವೆ. ಏಕಾದಶಿ ವ್ರತವನ್ನು ಆಚರಿಸುತ್ತಿದ್ದವರ ಸಂತಾನವಾದ ನಾವು ಉಪವಾಸಕ್ಕೆ ಹೆದುರುತ್ತಿದ್ದೇವೆ.

ಯೋಗ ಭೂಮಿಯ ಜನರ ಸ್ಥಿತಿ ಏಕೆ ಹೀಗಾಗಿದೆ. ಪ್ರತಿಯೊಂದು ಕಾರ್ಯದ ಪ್ರಾರಂಭದಲ್ಲಿ ಪ್ರಾಣಾಯಾಮದ ನಿಬಂಧನೆಗಳನ್ನು ಹಾಕಿದ್ದ ದೇಶದ ಜನ ಇಂದು ಮನೆಗೊಬ್ಬರಂತೆ ಅಸ್ತಮಾದಿಂದ ಏಕೆ ನರಳುತ್ತಿದ್ದೇವೆ. ಊಟದ ವಿಷಯದಲ್ಲಿ ಅಷ್ಟೊಂದು ನಿಯಮಗಳನ್ನು ಅನುಸರಿಸುತ್ತಿದ್ದ ದೇಶದ ಜನರ ಮನೆಗಳಲ್ಲಿ ಮನೆಗೊಬ್ಬರಂತೆ ಏತಕ್ಕೆ ಗ್ಯಾಸ್ಟ್ರಿಕ್‌ನಿಂದ ನರಳುತ್ತಿದ್ದೇವೆ. ಸಸ್ಯಾಹಾರದ ಸಾತ್ವಿಕತೆಯನ್ನು ಅರಿತಿದ್ದ ಜನರ ಸಂತಾನವೇಕೆ ಮಾಂಸಾಹಾರಕ್ಕಾಗಿ ಬಾಯಿ ಚಪ್ಪರಿಸುತ್ತಿದೆ. ಸಸ್ಯಹಾರಿಗಳೆಂದು ಬೀಗುವ ಅನೇಕರು ಹೇಗೆ ತಮ್ಮ ರೋಗಗಳಿಗಾಗಿ ಪ್ರಾಣಿಗಳ ಅಂಗಗಳಿಂದ ತೆಗೆದ ರಸ ಧಾತುಗಳಿಂದಾದ ಇಂಜೆಕ್ಷನ್ ಮಾತ್ರೆಗಳನ್ನು ಬಳಸುತ್ತಿದ್ದಾರೆ. ಏನು ಕೇಳಿದರು ಇದು ನಮ್ಮಲ್ಲಿತ್ತು ಎಂದು ಹೇಳುವ ಜನರೇಕೆ ಪಾಶ್ಚಿಮಾತ್ಯರ ಅಂಧಾನುಕರಣೆಯಲ್ಲಿದ್ದಾರೆ. ಇವುಗಳಿಗೂ ನಮ್ಮ ರೋಗಗಳ ಹೆಚ್ಚಳಕ್ಕೂ ಏನು ಸಂಬಂಧ!

ನಮ್ಮ ವ್ಯವಸ್ಥೆಗೂ ನಮ್ಮ ಜೀವನ ಪದ್ಧತಿಗೂ, ರೋಗಗಳ ಹೆಚ್ಚಳಕ್ಕೂ ಸಂಬಂಧವಿರಲೇಬೇಕು. ಬಹಳ ಹಿಂದೆ ಮುಪ್ಪು ನೂರಕ್ಕೆ ಈಚೆಗದು ಬಂದಿತು ಅರವತ್ತಕೆ ಈಗ ಬಂದಿಹುದು ಮೂವತ್ತಕ್ಕೆ

ಹೀಗೆ ಬರುತಿಹುದು ಮುಂದುಮುಂದಕೆ. ಹಿಂದೆ ಅರವತ್ತು ವರ್ಷಕ್ಕೆ ಮೆಡಿಕಲ್ ಚೆಕಪ್ ಅನ್ನುತ್ತಿದ್ದವರು ಈಗ ನಲವತ್ತು ವರ್ಷಕ್ಕೆ ಎನ್ನುತ್ತಿದ್ದಾರೆ. ಇನ್ನು ಮುಂದಿನ ದಿನದಲ್ಲಿ ಮೂವತ್ತು ವರ್ಷ ತುಂಬಿದ ತಕ್ಷಣ ಚೆಕಪ್ ಮಾಡಿಸಿಕೊಳ್ಳಿ ಎಂದು ಹೇಳುವಂತಹ ಸ್ಥಿತಿಗೆ ಬಂದು ತಲುಪುವ ಹತ್ತಿರದಲ್ಲಿದ್ದೇವೆ. ಇಷ್ಟೆಲ್ಲಾ ಅನ್ವೇಷಣೆಗಳ ನಂತರವೂ ಸಹ ರೋಗಗಳು ಹೆಚ್ಚುತ್ತಲೇ ಇವೆ. ಆರ್ಥಿಕವಾಗಿ ಮುಂದುವರಿದ ದೇಶಗಳಲ್ಲಿಯೂ ಸಹ ರೋಗಗಳೇನೂ ಕಡಿಮೆ ಇಲ್ಲ ಮುಂದುವರೆಯುತ್ತಿರುವ ದೇಶಗಳಲ್ಲಿಯೂ ಸಹ ಹಿಂದಿಗಿಂತ ಇಂದು ಕುಟುಂಬದ ಆರ್ಥಿಕ ಶಕ್ತಿ ಹೆಚ್ಚಿದೆ ಆದರೆ ಕುಟುಂಬದವರ ಆರೋಗ್ಯ ಅಷ್ಟೇ ಕಡಿಮೆಯಾಗಿದೆ.

ಎಚ್ಚೆತ್ತುಕೊಳ್ಳುವ ಸಮಯವನ್ನು ಪ್ರಕೃತಿ ನಮ್ಮೆಲ್ಲರಿಗೂ ತಿಳಿಸುತ್ತಿದೆ. ಅರ್ಥೈಸಿಕೊಂಡು ಜೀವನ ಪದ್ಧತಿಯ ಬದಲಾವಣೆಯನ್ನು ಆದಷ್ಟು ಬೇಗ ಸರಿಪಡಿಸಿಕೊಳ್ಳದಿದ್ದರೆ ಅನಾರೋಗ್ಯದ ತೊಂದರೆಗಳಿಂದಲೇ ನಾಶ ಹೊಂದುತ್ತೇವೆ.

ಬಸವಣ್ಣನವರು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ಹಾವು ತಿಂದವರ ನುಡಿಸಬಹುದು,
ಗರ ಹೊಡೆದವರ ನುಡಿಸಬಹುದು,
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯ
ಬಡತನವೆಂಬ ಮಂತ್ರವಾದಿ ಹೋಗಲು
ಒಡನೆ ನುಡಿವರು ಕೂಡಲ ಸಂಗಮದೇವ.

ಅಂದರೆ ಹಾವು ಕಚ್ಚಿದವರನ್ನು ಬದುಕಿಸಬಹುದು ಭೂತ ದೆವ್ವ ಮೆಟ್ಟಿದವರನ್ನು ಓಡಿಸಬಹುದು ಆದರೆ ಸಿರಿತನದ ಅಹಂ ಇರುವವರನ್ನು ಬದಲಿಸುವುದು ಕಷ್ಟ ಅವರಿಗೆ ಬಡತನ ಬಂದಾಗ ಎಚ್ಚರಾಗುತ್ತಾರೆ. ಅಷ್ಟೊತ್ತಿಗೆ ಬಹಳ ಸಮಯವಾಗಿರುತ್ತದೆ. ಏನನ್ನು ಮಾಡುವ ಸ್ಥಿತಿಯಲ್ಲಿ ಇರುವುದಿಲ್ಲ. ಇದನ್ನೇ ನಮ್ಮ ಆರೋಗ್ಯ ವಿಚಾರದಲ್ಲೂ ನಾವುಗಳು ತಪ್ಪು ಮಾಡುತ್ತಿದ್ದೇವೆ.

## ಆರೋಗ್ಯ ಕೆಟ್ಟವರಿಗಷ್ಟೇ ಅದರ ಮಾಹಿತಿ

ಮಕ್ಕಳಿಗೆ ತಮ್ಮ ಆರೋಗ್ಯದ ಬಗ್ಗೆ ಅರಿವಿರುವುದಿಲ್ಲ. ಯುವಕರಿಗೆ ಹೇಳಿದರೆ ಅವರು ಕೇಳುವ ಮನಸ್ಥಿತಿಯಲ್ಲಿ ಇರುವುದಿಲ್ಲ. ಮಧ್ಯಮ ವಯಸ್ಸಿನವರು ದುಡಿಮೆಯ ಚಿಂತೆಯಲ್ಲಿ ಮುಳುಗಿರುತ್ತಾರೆ. ಇನ್ನು ಅರವತ್ತು ವರ್ಷ ದಾಟಿದವರಿಗೆ ಶರೀರ



ಸರಿಯಾಗಿ ಸ್ಪಂದಿಸುವುದಿಲ್ಲ. ಹೀಗಾದರೆ ಆರೋಗ್ಯದ ಕಾಳಜಿ ಯಾರಿಗಿರುತ್ತದೆ. ಕಾಯಿಲೆ ಬಂದವರಿಗಷ್ಟೇ ಆರೋಗ್ಯದ ಮಹತ್ವ ತಿಳಿಯುತ್ತದೆ. ಅಷ್ಟೊತ್ತಿಗೆ ಕಾಲ ಮಿಂಚಿ ಹೋಗಿರುತ್ತದೆ. ಅಂದರೆ ಮಳೆ ನಿಂತು ಹೋದ ಮೇಲೆ ಛತ್ರಿ ಹಿಡಿದುಕೊಂಡರೆ ಪ್ರಯೋಜನವಿಲ್ಲ ಮುಂಚೆಯೇ ವ್ಯವಸ್ಥೆ ಮಾಡಿಕೊಂಡರೆ ಅನುಕೂಲವಿದೆ. ರೋಗಗಳ ಬಗ್ಗೆ ಭಯಪಡದೆ ಪ್ರಕೃತಿ ಮಾತೆಯ ದಾರಿಯಲ್ಲಿ ಮುನ್ನಡೆಯುವ ಪ್ರಯತ್ನ ಎಲ್ಲರೂ ಮಾಡೋಣ ಆಗ ಮಾತ್ರವೇ ನಿರೋಗಿಗಳಾಗಿ ಸಂತೋಷದಿಂದ ಇರಲು ಆಗುವುದು. ಮೇಲಿನ ಒಂದಿಷ್ಟು ಉಕ್ತಿಗಳು ರೋಗದ ಭಯವೇಕೆ ಎಂಬ ಪುಸ್ತಕದ ಆಯ್ದ ಕೆಲವು ಮಾಹಿತಿ ಹಂಚಿಕೊಂಡಿದ್ದೇನೆ.

ಕಾರಣ ರೋಗದ ಭಯ ಬೇಡ ಧೈರ್ಯದಿಂದ ಇದ್ದರೆ ಅದುವೇ ಔಷಧಿಯಾಗಿ ಕೆಲಸ ಮಾಡುತ್ತದೆ ಅನ್ನುವುದಕ್ಕೆ ಒಂದು ಉದಾಹರಣೆ. ಆರು ತಿಂಗಳ ಹಿಂದೆ ಒಬ್ಬರು ನನ್ನ ಹತ್ತಿರ ಹೃದಯ ಸಂಬಂಧಿ ತೊಂದರೆ ಇದೆಯೆಂದು ವೈದ್ಯರು ತಿಳಿಸಿದ್ದಾರೆ ನನಗೆ ಭಯವಾಗುತ್ತಿದೆ ಏನು ಮಾಡುವುದು ಎಂದರು. ಆಗ ಅವರಿಗೆ ಧೈರ್ಯ ತುಂಬಿ ಪ್ರಕೃತಿಯ ನಿಯಮ ಪಾಲಿಸಿ ಅರ್ಥಾತ್ ಯೋಗ, ಪ್ರಾಣಾಯಾಮ ಅಲ್ಲದೆ ನಿತ್ಯ ವರ್ಜಿನ್ ಕೊಕೊನಟ್ ಆಯಿಲ್ ತಿನ್ನಲು ಮತ್ತು ಮನೆಯ ಊಟಕ್ಕೆ ಪ್ರಾಮುಖ್ಯತೆ ಕೊಡಿ ಎಂದು ಹೇಳಿದ್ದರ ಫಲವೇ ಇವತ್ತಿಗೂ ಆರೋಗ್ಯದಿಂದ ಇರುವುದಕ್ಕೆ ಸಾಧ್ಯವಾಗಿದೆ. ಇಂತಹ ಉದಾಹರಣೆಗಳ ನೂರಾರು ಜನರು ಇಂದಿಗೂ ಸಲಹೆಗಳನ್ನು ಪಡೆದುಕೊಳ್ಳುತ್ತಾ ಧೈರ್ಯದಿಂದ ಬದುಕುತ್ತಿದ್ದಾರೆ. ನಿಮಗೂ ಏನಾದರೂ ಮಾರ್ಗದರ್ಶನ ಬೇಕಾದರೆ ಪಡೆದುಕೊಳ್ಳಿ. ಏಕೆಂದರೆ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವುದೇ ನಿಜವಾದ ಧರ್ಮ.

# ಇತಿಹಾಸದಲ್ಲಿ ಈ ದಿನ

## ಜುಲೈ - 6

1947: ಸರ್ ಸಿ. ರಾಜಗೋಪಾಲಾಚಾರಿ ಅವರು ಭಾರತದ ಕೊನೆಯ ಜನರಲ್ ಗವರ್ನರ್ ಆಗಿ ಪ್ರಮಾಣ ವಚನ ಸ್ವೀಕರಿಸಿದರು. ಅವರು ಬ್ರಿಟಿಷ್ ನಾಯಕನಲ್ಲದ ಭಾರತದ ಮೊದಲ ಗವರ್ನರ್ ಜನರಲ್ ಆಗಿದ್ದರು.

2006: ಭಾರತದಲ್ಲಿ ನ್ಯಾನೋ ತಂತ್ರಜ್ಞಾನ ಅಭಿವೃದ್ಧಿಗೆ ಸಂಬಂಧಿಸಿದ ರಾಷ್ಟ್ರೀಯ ಸಂಶೋಧನಾ ಕೇಂದ್ರ ಸ್ಥಾಪನೆಗೆ ತೀರ್ಮಾನ ಮಾಡಲಾಯಿತು.

1415: ಮಾರ್ಟಿನ್ ಲೂಥರ್ ಮುಂಚಿನ ಧಾರ್ಮಿಕ ಸುಧಾರಣಾ ಚಳವಳಿಯ ಪೈಕಿ ಪ್ರಮುಖ ವ್ಯಕ್ತಿ ಜಾನ್ ಹಸ್ ಅವರನ್ನು ಚರ್ಚ್ ವಹಿವಾಟಿನಲ್ಲಿ ದೋಷಿಯಾಗಿಸಿ ಜೀವಂತವಾಗಿ ಸುಟ್ಟುಹಾಕಲಾಯಿತು.

1885: ಫ್ರಾನ್ಸ್‌ನ ವಿಜ್ಞಾನಿ ಲೂಯಿ ಪಾಶ್ಚರ್ ಮೊದಲ ಬಾರಿಗೆ ಶ್ವಾನದ ಕಚ್ಚುವಿಕೆಯಿಂದ ಹುಟ್ಟುವ ರೇಬೀಸ್ ವಿರುದ್ಧದ ಲಸಿಕೆಯನ್ನು ಯಶಸ್ವಿಯಾಗಿ ಮಗುವಿಗೆ ನೀಡಿದರು.

1957: ಜಾನ್ ಲೆನನ್ ಮತ್ತು ಪಾಲ್ ಮೆಕ್ಕಾರ್ಟ್ನಿ ಲಿವರ್ಪೂಲಿನಲ್ಲಿ ಮೊದಲ ಬಾರಿಗೆ ಭೇಟಿಯಾದರು.

### ಜನನ

1907: ಫ್ರಿಡಾ ಕಾಲೋ, ಮೆಕ್ಸಿಕೋ ಮೂಲದ ಪ್ರಸಿದ್ಧ ಚಿತ್ರಕಾರ್ತಿ.

1921: ನ್ಯಾನ್ಸಿ ರೀಗನ್, ಅಮೆರಿಕದ ಮಾಜಿ ಪ್ರಥಮ ಮಹಿಳೆ.

### ಮರಣ

1535: ಸರ್ ಥಾಮಸ್ ಮೋರ್, ಇಂಗ್ಲೆಂಡ್‌ನ ರಾಜಾ ಹೈನ್ರಿ ಎಂಟನೇ ವಿರುದ್ಧ ಧರ್ಮ ಸಂಬಂಧಿತ ವಿಷಯದಲ್ಲಿ ವಿರೋಧ ವ್ಯಕ್ತಪಡಿಸಿದ್ದಕ್ಕಾಗಿ ಕೊಲೆಗೊಳಿಸಲ್ಪಟ್ಟನು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248